# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಸರ್ವ ಶಿಕ್ಷಣ ಅಭಿಯಾನದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಜೂರಾದ ಹುದ್ದೆಗಳಿಗೆ ಸರ್ಕಾರದ ಮಂಜೂರಾತಿ ಆದೇಶ ಹೊರಡಿಸುವ ಕುರಿತು.

ಓದಲಾಗಿದೆ:- ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಬೆಂಗಳೂರು ರವರ ಪತ್ರ ಸಂಖ್ಯೆ: ಸಶಿಅ/ಸಿ-1/ಎಪಿಸಿ/ಹೊ.ಹು.ಸೃ/2007-08/ದಿನಾಂಕ: 03-11-2007

*********

**ಪ್ರಸ್ತಾವನೆ:-**

ಮೇಲೆ ಓದಲಾದ ಪತ್ರದಲ್ಲಿ ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಬೆಂಗಳೂರು ರವರ ಪತ್ರದಲ್ಲಿ ಸರ್ವ ಶಿಕ್ಷಣ ಅಭಿಯಾನ ಸಂಸ್ಥೆಗೆ ಈ ಕೆಳಕಂಡ ಸುಮಾರು 48 ಹುದ್ದೆಗಳನ್ನು ಹಾಗೂ 12 ಡಾಟಾ ಎಂಟ್ರಿ ಆಪರೇಟರ್ ಗಳ ಹುದ್ದೆಗಳನ್ನು ಸೃಜಿಸಲು ಹಾಗೂ ಆ ಹುದ್ದೆಗಳಿಗೆ ಸರ್ವ ಶಿಕ್ಷಣ ಅಭಿಯಾನದ ಆಡಳಿತಾತ್ಮಕ ವೆಚ್ಚದಿಂದ ಭರಿಸಲು 15 ಮತ್ತು 17ನೇ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಿರುವುದಾಗಿ ತಿಳಿಸಿ ಸರ್ಕಾರದ ಆದೇಶವನ್ನು ಕೋರಿರುತ್ತಾರೆ.

| ಕ್ರ. ಸಂ | ಹುದ್ದೆಗಳ ಹೆಸರು | ಹುದ್ದೆ ಸಂಖ್ಯೆ | ಯಾವ ಜಿಲ್ಲೆಗೆ | ಷರಾ |
|---|---|---|---|---|
| 1. | ಸಹ ನಿರ್ದೇಶಕರು | 1 | ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಕೆ.ಎಸ್.ಕ್ಯೂ.ಎ.ಓ ಘಟಕ, ಬೆಂಗಳೂರು | ಶಿಕ್ಷಣ ಇಲಾಖೆಯಿಂದ ಸ್ಥಳ ನಿಯುಕ್ತಿ |
| 2. | ಹಿರಿಯ ಸಹಾಯಕ ನಿರ್ದೇಶಕರು | 1 | ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಕೆ.ಎಸ್.ಕ್ಯೂ.ಎ.ಓ ಘಟಕ, ಬೆಂಗಳೂರು | ಶಿಕ್ಷಣ ಇಲಾಖೆಯಿಂದ ಸ್ಥಳ ನಿಯುಕ್ತಿ |
| 3. | ಸಹಾಯಕ ನಿರ್ದೇಶಕರು | 3 | ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಕೆ.ಎಸ್.ಕ್ಯೂ.ಎ.ಓ ಘಟಕ, ಬೆಂಗಳೂರು | ಶಿಕ್ಷಣ ಇಲಾಖೆಯಿಂದ ಸ್ಥಳ ನಿಯುಕ್ತಿ |
| 4. | ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು | 1 | ರಾಮನಗರ ಜಿಲ್ಲೆ [ಹೊಸ ಜಿಲ್ಲೆ] | ಶಿಕ್ಷಣ ಇಲಾಖೆಯಿಂದ ಸ್ಥಳ ನಿಯುಕ್ತಿ |
| 5. | ಸಹಾಯಕಯೋಜನಾ ಸಮನ್ವಯಾಧಿಕಾರಿಗಳು | 2+10 | ರಾಮನಗರ ಜಿಲ್ಲೆ - 02 ಹುದ್ದೆಗಳು ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳ ಕಾರ್ಯತಂತ್ರಕ್ಕಾಗಿ 10 ಹುದ್ದೆಗಳು. [ಬಿಜಾಪುರ, ಬಾಗಲಕೋಟೆ, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ, ಬೀದರ್, ಬಳ್ಳಾರಿ, ಬೆಂಗಳೂರು ಉತ್ತರ, ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆ ತಲಾ ಒಂದು ಹುದ್ದೆ. | ಶಿಕ್ಷಣ ಇಲಾಖೆಯಿಂದ ಸ್ಥಳ ನಿಯುಕ್ತಿ. |

| ಕ್ರ. ಸಂ | ಹುದ್ದೆಗಳ ಹೆಸರು | ಹುದ್ದೆ ಸಂಖ್ಯೆ | ಯಾವ ಜಿಲ್ಲೆಗೆ | ಷರಾ |
|---|---|---|---|---|
| 6. | ಕಂಪ್ಯೂಟರ್ ಪ್ರೋಗ್ರಾಮರ್ | 06 | ರಾಮನಗರ,ಮಧುಗಿರಿ,ಚಿಕ್ಕೋಡಿ, ಚಿಕ್ಕಬಳ್ಳಾಪುರ, ಬೆಂಗಳೂರು ಉತ್ತರ, ಯಾದಗಿರಿ ಜಿಲ್ಲೆಗಳು [ಪ್ರತಿ ಜಿಲ್ಲೆಗೆ 01 ರಂತೆ] | ಹೊರಗುತ್ತಿಗೆ ಆಧಾರದ ಮೇಲೆ ಏಜೆನ್ಸಿ ಮೂಲಕ ನೇಮಕ |
| 7. | ಲೆಕ್ಕಾಧೀಕ್ಷಕರು | 06 | ರಾಮನಗರ,ಮಧುಗಿರಿ,ಚಿಕ್ಕೋಡಿ, ಚಿಕ್ಕಬಳ್ಳಾಪುರ, ಬೆಂಗಳೂರು ಉತ್ತರ, ಯಾದಗಿರಿ ಜಿಲ್ಲೆಗಳು [ಪ್ರತಿ ಜಿಲ್ಲೆಗೆ 01 ರಂತೆ] | ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ |
| 8. | ಪ್ರಥಮ ದರ್ಜೆ ಸಹಾಯಕರು | 06 | ರಾಮನಗರ,ಮಧುಗಿರಿ,ಚಿಕ್ಕೋಡಿ, ಚಿಕ್ಕಬಳ್ಳಾಪುರ, ಬೆಂಗಳೂರು ಉತ್ತರ, ಯಾದಗಿರಿ ಜಿಲ್ಲೆಗಳು [ಪ್ರತಿ ಜಿಲ್ಲೆಗೆ 01 ರಂತೆ] | ಶಿಕ್ಷಣ ಇಲಾಖೆ ಯಿಂದನಿಯೋಜನೆ |
| 9. | ಡಾಟ ಎಂಟ್ರಿ ಆಪರೇಟರ್ಸ್ | 12 | ರಾಮನಗರ,ಮಧುಗಿರಿ,ಚಿಕ್ಕೋಡಿ, ಚಿಕ್ಕಬಳ್ಳಾಪುರ, ಬೆಂಗಳೂರು ಉತ್ತರ, ಯಾದಗಿರಿ ಜಿಲ್ಲೆಗಳು [ಪ್ರತಿ ಜಿಲ್ಲೆಗೆ 02 ರಂತೆ] | ಹೊರಗುತ್ತಿಗೆ ಆಧಾರದ ಮೇಲೆ ಏಜೆನ್ಸಿ ಮೂಲಕ ನೇಮಕ |
| | ಒಟ್ಟು ಹುದ್ದೆ | 48 | | |

ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ ಇಡಿ:214 ಎಂ.ಸಿ.ಡಿ 2007 ಬೆಂಗಳೂರು,**
**ದಿನಾಂಕ 30 ನೇ ನವೆಂಬರ್ 2007**
**[ಇಡಿ: :ಸ್ಟೀಮರ (ಯುನಿಕ್) ಬೆಂಗಳೂರು ದಿನಾಂಕ 30-11-2007]**

ಸರ್ವ ಶಿಕ್ಷಣ ಅಭಿಯಾನ ಸಂಸ್ಥೆಗೆ ಅನುಬಂಧದಲ್ಲಿ ತೋರಿಸಿರುವ ಒಟ್ಟು 30 ಹುದ್ದೆಗಳನ್ನು ಸೃಜಿಸಿ ಅದನ್ನು ಶಿಕ್ಷಣ ಇಲಾಖೆ ಹಾಗೂ ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ನಿಯೋಜನೆ ಮೇರೆಗೆ ತುಂಬಲು ಸರ್ಕಾರವು ರಾಜ್ಯ ಯೋಜನಾ ನಿರ್ದೇಶಕರು ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರುರವರಿಗೆ ಅನುಮತಿ ನೀಡಿದೆ.

6 ಕಂಪ್ಯೂಟರ್ ಪ್ರೋಗ್ರಾಮರ್‌ಗಳನ್ನು ಮತ್ತು 12 ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಏಜೆನ್ಸಿ ಮೂಲಕ ನೇಮಕಮಾಡಿಕೊಳ್ಳಲು ರಾಜ್ಯ ಯೋಜನಾ ನಿರ್ದೇಶಕರಿಗೆ ಅನುಮತಿ ನೀಡಲಾಗಿದೆ.

ಮೇಲ್ಕಂಡ ಎಲ್ಲಾ ಹುದ್ದೆಗಳ ವೇತನವನ್ನು ಸರ್ವ ಶಿಕ್ಷಣ ಅಭಿಯಾನದ ಆಡಳಿತಾತ್ಮಕ ವೆಚ್ಚದಿಂದ ಭರಿಸತಕ್ಕದ್ದು. ಮೇಲ್ಕಂಡಂತೆ ಸೃಜಿಸಲ್ಪಟ್ಟ ಹುದ್ದೆಗಳು ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮವು ಜಾರಿಯಲ್ಲಿರುವವರೆಗೆ ಮಾತ್ರ ಚಾಲ್ತಿಯಲ್ಲಿರುತ್ತವೆ.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ, ಸಂಖ್ಯೆ: ಆಇ 1168/ವೆಚ್ಚ-8/07, ದಿನಾಂಕ: 28-11-2007ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಭಾರತ ಸರ್ಕಾರದ ರಾಷ್ಟ್ರಪತಿಗಳ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

(ಕೆ. ಶ್ರೀಕಂಠೇಶ್ವರ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಸಹ ಕಾರ್ಯದರ್ಶಿ(ಯೋಜನೆ)
ಶಿಕ್ಷಣ ಇಲಾಖೆ.

ಗೆ:-

1. ಮಹಾಲೇಖಪಾಲರು, ಕರ್ನಾಟಕ (ಆಡಿಟ್ 1 ಮತ್ತು 2), ಬೆಂಗಳೂರು
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
4. ನಿಯಂತ್ರಕರು ರಾಜ್ಯ ಲೆಕ್ಕ ಪತ್ರ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಖಜಾನಾ ನಿರ್ದೇಶನಾಲಯ, ಬೆಂಗಳೂರು
6. ಉಪಕಾರ್ಯದರ್ಶಿ-2, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
7. ರಾಜ್ಯ ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು
8. ಉಪನಿರ್ದೇಶಕರು, ಖಜಾನಾ ಗಣಕ ಕೇಂದ್ರ, ನಂ.49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿ, [ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ] ಶಿಕ್ಷಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
10. ಸಾಪ್ತಾಹಿಕ ರಾಜ್ಯ ಪತ್ರ
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು